ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 140-144
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಚಾಮರಾಜನಗರ ತಾಲೂಕಿನ ಶಾಸನಗಳ ಹಿನ್ನೆಲೆಯಲ್ಲಿ ಜೈನ ಬಸದಿಗಳು: ಒಂದು ಅವಲೋಕನ

**ಮಲ್ಲೇಶ್. ಕೆ[1] & ಡಾ.ಕೆ.ಪ್ರಭು[2]**
[1]ಸಂಶೋಧನಾ ವಿದ್ಯಾರ್ಥಿ & [2]ಸಹ ಪ್ರಾಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***

*ಚಾಮರಾಜನಗರ ಜಿಲ್ಲೆಯು ಪ್ರಾಕೃತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿದೆ. ಜಿಲ್ಲೆಯಲ್ಲಿ ಅನೇಕ ಶಾಸನಗಳು ದೊರೆತಿದ್ದು, ಇಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಇತಿಹಾಸಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಪ್ರದೇಶದಲ್ಲಿ ಗಂಗರು, ಕಲ್ಯಾಣದ ಚಾಲುಕ್ಯರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಅರಸರು, ನಂದ್ಯಾಲ, ಕಳಲೆ ಪ್ರಭುಗಳು ಮೈಸೂರು ಒಡೆಯರು ಅನೇಕ ರಾಜಮನೆತನಗಳು ಕಾಲಾನುಕ್ರಮದಲ್ಲಿ ಆಡಳಿತ ನಡೆಸಿದ್ದು, ಈ ಎಲ್ಲಾ ರಾಜಮನೆತನಗಳು ಸಾಂಸ್ಕೃತಿಕ ಮತ್ತು ಧಾರ್ಮಿಕ ಬೆಳವಣಿಗೆಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.*

**Keywords:** *ಚಾಮರಾಜನಗರ, ಮಲೆಯೂರು, ಹರವೆ, ಬಸ್ತೀಪುರ, ಶಾಸನಗಳು, ಜೈನ ಬಸದಿಗಳು.*

## ಪೀಠಿಕೆ

ಚಾಮರಾಜನಗರ ತಾಲೂಕಿನ ಹಲವಾರು ಪ್ರದೇಶಗಳಲ್ಲಿ ಜೈನ ಧರ್ಮ ಹೆಚ್ಚು ಪ್ರಚಲಿತದಲ್ಲಿತ್ತು ಎಂಬುದನ್ನು ತಾಲೂಕಿನಲ್ಲಿ ದೊರೆತಿರುವ ಶಾಸನಗಳು, ಬಸದಿಗಳು, ನಿಷಿಧಿ ಕಲ್ಲುಗಳು, ಮಂದಿರಗಳು ಹಾಗೂ ಇತರ ಕುರುಹುಗಳಿಂದ ತಿಳಿದುಕೊಳ್ಳಬಹುದಾಗಿದೆ. ಕರ್ನಾಟಕದಲ್ಲಿ ಜೈನ ಧರ್ಮವು ಕ್ರಿ.ಪೂ. ಕಾಲದಲ್ಲಿಯೇ ಪ್ರವರ್ಧಮಾನಕ್ಕೆ ಬಂದಿದ್ದು, ಪ್ರಾಚೀನ ಕಾಲದಿಂದಲೂ ಈ ಪ್ರಾಂತ್ಯವು ಧಿಗಂಬರ ಜೈನರಿಗೆ ಮುಖ್ಯಸ್ಥಾನವಾಗಿತ್ತು. ಇಲ್ಲಿ ಆಡಳಿತ ನಡೆಸಿರುವ ಅನೇಕ ರಾಜಮನೆತನಗಳು ಜೈನಧರ್ಮಕ್ಕೆ ಪ್ರೋತ್ಸಾಹ ಕೊಟ್ಟಿರುವುದನ್ನು ಅನೇಕ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ತಾಲೂಕಿನ ಅನೇಕ ಕಡೆಗಳಲ್ಲಿ ಜೈನ ಬಸದಿಗಳು ನಿರ್ಮಾಣವಾಗಿದ್ದು ಜೈನ ಕವಿಗಳು ಸಾಹಿತ್ಯ ರಚಿಸಿದ್ದಾರೆ.

ಶಾಸನಗಳು ಈ ನಾಡಿನ ಸಂಪತ್ತು, ತೇದಿ ಸಹಿತ ಹಾಗೂ ತೇದಿ ರಹಿತ ಸಹಸ್ರಾರು ಶಾಸನಗಳು ಈ ಭಾಗದಲ್ಲಿವೆ. ಚಾಮರಾಜನಗರದ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ದೊರೆತಿರುವ ಶಾಸನದಲ್ಲಿ 28 ಸಾಲುಗಳಿವೆ. ಈ ಶಾಸನದ ಪ್ರಕಾರ ಕ್ರಿ.ಶ. 1116ರಲ್ಲಿ ಎಣ್ಣೇನಾಡಿನ ಪ್ರಾಂತ್ಯದ ಅರಿಕೊಠಾರದಲ್ಲಿ ತ್ರಿಕೂಟ ಬಸದಿಯನ್ನು ಪುಣಿಸರಾಜ ದಂಡಾದೀಪ ಎಂಬುವವನು ಪುಣಿಸ ಜಿನಾಲಯವನ್ನು ಕಟ್ಟಿಸಿರುವ ಬಗ್ಗೆ ಮಾಹಿತಿಯಿದೆ. ಪ್ರಸ್ತುತ ಈ ಬಸದಿಯು ಜೀರ್ಣೋದ್ಧಾರವಾಗಿದ್ದು ಪೂಜಾಕಾರ್ಯಗಳು ನಡೆಯುತ್ತಿವೆ. ಇದೇ ಬಸದಿಯ ಪ್ರಾಕಾರದಲ್ಲಿ ಮತ್ತೊಂದು ಶಿಲಾಶಾಸನವಿದ್ದು, ಇದು ಪಶ್ಚಮಾಭಿಮುಖವಾಗಿದೆ. 21 ಸಾಲುಗಳುಳ್ಳ ಈ ಶಾಸನವನ್ನು ಶಕವರ್ಷ 1201 ಅಂದರೆ ಕ್ರಿ.ಶ. 1281

***Please cite this article as:*** ಮಲ್ಲೇಶ್. ಕೆ. & ಕೆ. ಪ್ರಭು. (2023). ಚಾಮರಾಜನಗರ ತಾಲೂಕಿನ ಶಾಸನಗಳ ಹಿನ್ನೆಲೆಯಲ್ಲಿ ಜೈನ ಬಸದಿಗಳು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 140–144.

ಡಿಸೆಂಬರ್ 25 ರಂದು ಹೊಯ್ಸಳರ ಆಡಳಿತ ಕಾಲದಲ್ಲಿ 3ನೇ ವೀರನರಸಿಂಹನು ಬರೆಸಿರುವುದಾಗಿ ಉಲ್ಲೇಖವಿದೆ. ಈ ಶಾಸನದ ಉಲ್ಲೇಖದ ಪ್ರಕಾರ ಅರಿಕೊತಾರದ ಈ ಬಸದಿಗೆ ಸಕಲ ಪೂಜೆ ಹಾಗೂ ಇನ್ನಿತರ ಕಾರ್ಯಗಳಿಗೆ ಭೂಮಿಯನ್ನು ದಾನವಾಗಿ ನೀಡಿರುವುದು ಕಂಡುಬರುತ್ತದೆ. ಬಸದಿಯ ಬಲ ಪಾರ್ಶ್ವದ ಹೊರಗೋಡೆಗೆ ಒರಗಿರುವ ಮತ್ತೊಂದು ಶಿಲಾಶಾಸನದಲ್ಲಿ 10 ಸಾಲುಗಳಿದ್ದು, ಈ ಊರಿನ ಮಹಾಪ್ರಭು ಕಾಮಯ್ಯ ನಾಯಕರ ಮಗ ವೀರಯ್ಯ ನಾಯಕರು ಚಾಮರಾಜನಗರದ ವಿಜಯನಾಥ ದೇವರ ಬಸದಿಗೆ ಮುಣಚನಹಳ್ಳಿಯನ್ನು ದಾನವಾಗಿ ನೀಡಿರುವ ಉಲ್ಲೇಖವಿದೆ.

ಚಾಮರಾಜನಗರ ಬಸದಿಯ ಪ್ರಾಕಾರದಲ್ಲಿ ಬಿದ್ದಿರುವ ವಿಗ್ರಹದ ಕೆಳಗೆ ಇರುವ ಶಾಸನವು ಆರು ಸಾಲುಗಳಿಂದ ಕೂಡಿದೆ. ಈ ಶಾಸನದಲ್ಲಿ ಮೂಲ ಸಂಘದ ಕಾನೂರ್ಗ್ಗಣದ ಅನಂತಕೀರ್ತಿ ದೇವರಗುಡ್ಡ ಬೊಪ್ಪಯ್ಯ ಸನ್ಯಾಸನ ವಿಧಿಜಾಂ ಸ್ವರ್ಗಸ್ತನಾದ ಬಗ್ಗೆ ತಿಳಿದುಬರುತ್ತದೆ, ಇದು ಕ್ರಿಶ 14ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಆದ ಕಾರಣ ಈತನು ಒಬ್ಬ ಪ್ರಮುಖ ಜೈನಾರ್ಚಕನಾಗಿದ್ದನೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಮಂಗಲ ಗ್ರಾಮದ ಜ್ಯೋತಿಕಲ್ಲು ಕೊಳದ ದಂಡೆಯ ಮೇಲಿರುವ ಶಾಸನದಲ್ಲಿ ಜೈನ ಗುರುಗಳು, ವೀರರು ಮತ್ತು ಅವರ ಪತ್ನಿಯರು ಮರಣವನ್ನು ಸ್ವೀಕರಿಸುತಿದ್ದ ಅಂಶವನ್ನು ಉಲ್ಲೇಖಿಸಿದ್ದಾರೆ. ಕ್ರಿ.ಶ 10–11ನೇ ಶತಮಾನದಲ್ಲಿ ಕೊಂಡಕುಂದಾನ್ವಯದ ಗುಣನಂದಿಕರ್ಮ ಪ್ರಕೃತಿಭಟ್ಟಾರರು 31 ದಿನ ಸನ್ಯಾಸ ವ್ರತ ಹಿಡಿದು ನಿರ್ವಾಣರಾದರು ಎಂದು ಈ ಶಾಸನದಿಂದ ತಿಳಿಯುತ್ತದೆ.

ಉಮ್ಮತ್ತೂರು ವರ್ಧಮಾನ ಸ್ವಾಮಿ ಬಸದಿಯ ಗರ್ಭಗುಡಿಯ ಹೊರಗೋಡೆಯ ಮೇಲೆ ಇರುವ ಶಾಸನವು ಕ್ರಿ.ಶ. 18ನೇ ಶತಮಾನಕ್ಕೆ ಸೇರಿದೆ. ಈ ಬಸದಿ ಪ್ರಾಚೀನ ಕಾಲದ್ದು, ಈ ಶಾಸನದಲ್ಲಿ ಪೆನುಗೊಂಡಪಾಯನ ಪಂಡಿತರು ವರ್ಧಮಾನ ಸ್ವಾಮಿ ಸೇವೆ ಎಂದು ತಿಳಿಸಲಾಗಿದೆ. ಪೆನುಗೊಂಡೆಯವರು ಈ ಬಸದಿಗೆ ಧಾರ್ಮಿಕ ಹಿನ್ನೆಲೆಯಲ್ಲಿ ಸಹಾಯ ಹಸ್ತ ನೀಡಿರುವುದು ತಿಳಿದು ಬರುತ್ತದೆ.

ಹಳೆ ಆಲೂರು ಸುವರ್ಣಾವತಿ ನದಿ ತೀರದ ಮಂಟಪದಲ್ಲಿರುವ ಶಾಸನದ ಪ್ರಕಾರ ಕ್ರಿ.ಶ. 1278ರಲ್ಲಿ ಹೊಯ್ಸಳ ದೊರೆ ಮೂರನೇ ವೀರಸಿಂಹನು ಇಲ್ಲಿ ಬಸದಿ ಜೀರ್ಣೋದ್ಧಾರ ಮಾಡಿಸಿದ ಬಗ್ಗೆ ತಿಳಿಸುವುದಲ್ಲದೆ ಗದ್ದೆ, ಬೆದ್ದಲು, ತೋಟದ ಮನೆ ಇನ್ನು ಮೊದಲಾದವುಗಳನ್ನು ಜನರಿಗೆ ದಾನ ನೀಡಿರುವುದು ತಿಳಿದುಬರುತ್ತದೆ. ಆಲೂರಿನ ವೇಳರು, ಕೋವರು, ಕುಣಿಂದರು, ನಲ್ಲೊಡೆಯರು ಇತ್ಯಾದಿ ಗುಂಪಿಗೆ ಸೇರಿದ ಅನೇಕರು ಚಂದ್ರನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿ ಈ ಬಸದಿಯಲ್ಲಿ ಪ್ರತಿದಿನ ಪೂಜೆ ನಡೆಯುವುದಕ್ಕೆ ಭೂಮಿಯನ್ನು ದಾನ ನೀಡಿದರು, ಮಲ್ಲಸೇನ ಮಾಲಾಧಾರಿಗಳ ಶಿಷ್ಯರು ಪಾರಿಸದೇವರ ಮಕ್ಕಳಾದ ಆದಿಮಣ್ಣ ಮತ್ತು ಚೆಲುವಣ್ಣರು ದತ್ತಿಯನ್ನು ಪಡೆದರು ಎಂಬುದನ್ನು ಈ ಶಾಸನದಿಂದ ತಿಳಿದುಕೊಳ್ಳಬಹುದಾಗಿದೆ.

ಕುಲಗಾಣ ಗ್ರಾಮದ ಈಶಾನ್ಯ ಭಾಗದ ಹೊಲವೊಂದರಲ್ಲಿ ದೊರೆತಿರುವ ಶಾಸನವು ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದ್ದಾಗಿದೆ. ಈ ಶಾಸನವು ಕನ್ನಡ ಮತ್ತು ತಮಿಳು ಭಾಷೆಯಲ್ಲಿದ್ದು, ಅಲ್ಲಲ್ಲಿ ಸಂಸ್ಕೃತ ಪದಗಳನ್ನು ಬಳಸಲಾಗಿದೆ. ಇದೇ ಸ್ಥಳದಲ್ಲಿ ಮತ್ತೊಂದು ಶಾಸನ ದೊರಕಿದೆ. ಈ ಶಾಸನದಲ್ಲಿ 15 ಸಾಲುಗಳಿದ್ದು, ಕ್ರಿ.ಶ 13ನೇ ಶತಮಾನ ಸೇರಿದ್ದಾಗಿದೆ. ಈ ಶಾಸನದಲ್ಲಿ ಎಡೆನಾಡ ಕುಲಗಾಣದ ಬಸದಿಗೆ ಮಹಾಪ್ರಧಾನ ಸೇನಾಧಿಪತಿ ಸರ್ವಾಧಿಕಾರಿಯಾದ ಕೇತಯ್ಯ ದಂಡನಾಯಕನು ತೆರಿಗೆಗಳಿಂದ ಬಂದ ಹಣವನ್ನು ದಾನವಾಗಿ ನೀಡಿರುವ ಉಲ್ಲೇಖವಿದೆ ಆದರೆ ಪ್ರಸ್ತುತ ಈ ಗ್ರಾಮದಲ್ಲಿ ಬಸದಿ ಇರುವುದಿಲ್ಲ. ಇದೇ ಗ್ರಾಮ(ಕುಲಗಾಣ) ವ್ಯಕ್ತಿಯೊಬ್ಬರ ಬಳಿ ತಾಮ್ರ

ಶಾಸನವಿದ್ದು, 5 ಹಲಗೆಯಲ್ಲಿ ಮುಂಭಾಗ ಮತ್ತು ಹಿಂಭಾಗದಲ್ಲಿ ಈ ಶಾಸನವನ್ನು ಬರೆಸಲಾಗಿದೆ. ಈ ಶಾಸನದಲ್ಲಿ ಕ್ರಿ.ಶ 7–8 ನೇ ಶತಮಾನಕ್ಕೆ ಸೇರಿದ ಗಂಗರ ದೊರೆ ಎರಡನೆ ಶಿವಮಾರನ ಚೈತ್ಯಾಲಯಕ್ಕೆ ದಾನ ನೀಡಿದ ಮಾಹಿತಿ ದೊರೆಯುತ್ತದೆ.

ಮಲೆಯೂರಿನ ಊರಿನ ಬಾಗಿಲ ಬಳಿ ಇರುವ ಶಾಸನದಲ್ಲಿ 'ಜೈನಶಾಸ್ತ್ರವು ವರ್ಧಿಸಲಿ ಎಂದು ಹೇಳುವ ಶ್ಲೋಕ ರೂಪದ ಸ್ತೋತ್ರ ಇದೆ. ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ1344 ಸಂದ ವರ್ತಮಾನ ಶುಭಕೃತು ಸಂವತ್ಸರದ ಶ್ರಾವಣ ಶುದ್ದ ಪೂರ್ಣಿಮ ಕ್ರಿ.ಶ. 1422 ಆಗಸ್ಟ್ 2 ಭಾನುವಾರ ಕನಕಗಿರಿಯ ಶ್ರೀ ವಿಜಯದೇವರಿಗೆ ಶ್ರೀ 1008 ವಿಜಯಪಾರ್ಶ್ವನಾಥ ಸ್ವಾಮಿಯವರಿಗೆ ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರ ಕುಮಾರ ಹರಿಹರರಾಯ ಒಡೆಯರು ಆ ಕನಕಗಿರಿಯ ಶ್ರೀ ವಿಜಯನಾಥದೇವರ ಅಮೃತಪಡಿ ಅಂಗಭೋಗ ವೈಭವಕ್ಕೆ ಕೊಟ್ಟ ಧರ್ಮ ಶಾಸನ' ಎಂಬ ಮಾಹಿತಿ ಇದೆ. ಈ ಶಾಸನದ ವಿವರ ಮುಂದೆ ನಲವತ್ತ ಮೂರು ಸಾಲುಗಳಿವೆ.

ವೀರ ಹರಿಹರರಾಯನು ಆನೆಗೊಂದಿಗೇಯನಿಗೆ ಶತ್ರುಗಳ ಉಪಟಳವೆಂದು ತಿಳಿದು ಅಲ್ಲಿಗೆ ಹೋಗುತ್ತ ಕನಕಗಿರಿಯ ಸಮೀಪಕ್ಕೆ ಬರುವಷ್ಟರಲ್ಲಿ ಸಂಜೆಯಾದ ಮೇಲೆ ದೇವಭೋಗದ ದೀಪಾರಾಧನೆಯ ಘಂಟೆ ಧ್ವನಿಯನ್ನು ಕೇಳಿದರು, ಆಗ ರಾಯನು ತನ್ನ ರಾಜ್ಯ ನನಗೆ ನಿಂತೊಡೆ ಈ ಮಲೆಯೂರು ಗ್ರಾಮದಲ್ಲಿ ಈ ಗಿರಿಯ ಮೇಲೆ ಜಿನ ಪ್ರತಿಮೆ ಪೂಜೆಗಾಗಿ ಸರ್ವ ಸಾಮಾನ್ಯವಾಗಿ ಕೊಡುವುದಾಗಿ ಹರಸಿಕೊಂಡು ಹೋಗಿ ನಂತರ ಆತನ ಎಲ್ಲಾ ಕಾರ್ಯ ನೆರವೇರಿತು. ಆನೆಗೊಂದಿ ರಾಜನನ್ನು ನೋಡಿದ ನಂತರ ಸಂತೋಷಗೊಂಡನು ಇದರಿಂದ ಸಂತೋಷವಾದ ಹರಿಹರ ರಾಯನು ಪುನಃ ಕನಕಗಿರಿ ವಿಜಯ ಪಾರ್ಶ್ವ ದೇವರಿಗೆ ಮಲೆಯೂರು ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಇದು ನಡೆದ ಕಾಲ ಕ್ರಿ.ಶ. 1344ನೇ ಶುಭಕೃತ್ ಸಂವತ್ಸರದ ಶ್ರಾವಣ ಶುದ್ದ ಪೂರ್ಣಿಮಾ ಕ್ರಿ.ಶ. 1422 ಆಗಸ್ಟ್ 2 ರಂದು. ಈ ಶಾಸನ ಇಂದಿಗೂ ಮಲೆಯೂರಿನ ಊರ ದ್ವಾರದಲ್ಲಿ ಕಂಡುಬರುತ್ತದೆ.

ಮಲೆಯೂರು ಬೆಟ್ಟದಮೇಲೆ ಸಂಪಿಗೆ ಬಾಗಿಲ ಪಶ್ಚಿಮ ಪಾರ್ಶ್ವದಲ್ಲಿರುವ ಶಾಸನವು ಓದಲಾಗದಷ್ಟು ಸವೆದು ಹೋಗಿದೆ. ಈ ಶಾಸನದಲ್ಲಿ 'ಮಲೆಯೂರಿನ ಒಬ್ಬ ಶೆಟ್ಟಿಯು (ಶೆಟ್ಟಿಯ ಹೆಸರು ಶಾಸನದಲ್ಲಿ ಸರಿಯಾಗಿ ಕಾಣುವುದಿಲ್ಲ) ಇಪ್ಪತ್ತು ಹೊನ್ನುಗಳ ದತ್ತಿಯನ್ನು ಕೊಟ್ಟು, ಹತ್ತು ಹೊನ್ನಿಗೆ ತಿಂಗಳಿಗೆ ಬರುವ ಎರಡು ಹಣ ಬಡ್ಡಿಯಿಂದ ಕನಕಗಿರಿಯ ಶ್ರೀ ವಿಜಯ ಪಾರ್ಶ್ವನಾಥ ಸ್ವಾಮಿಗೆ ದೀಪ ಆರತಿ ಸೇವೆಗೆ ಬಳಸುವಂತೆ ತಿಳಿದುಬರುತ್ತದೆ. ಇದರ ಕಾಲ ಶಕವರ್ಷ 1414 ಪರಿಧಾವಿ ಸಂವತ್ಸರದ ಚೈತ್ರಶುದ್ದ ಪಾಡ್ಯ ಕ್ರೀಶ 1492 ಫೆಬ್ರವರಿ 28 ಎಂಬುದಾಗಿ ತಿಳಿದುಬರುತ್ತದೆ.

ಮಲೆಯೂರು ಬೆಟ್ಟದಲ್ಲಿ ಗುಂಡಿನ ಬ್ರಹ್ಮದೇವರ ಗುಡಿಗೆ ಹೋಗುವ ಮಾರ್ಗದಲ್ಲಿ ಮತ್ತೊಂದು ಶಾಸನವಿದೆ. ಈ ಶಾಸನವು ಕ್ರಿ.ಶ. 1400ರ ಕಾಲಘಟ್ಟಕ್ಕೆ ಸೇರಿದ್ದಾಗಿದೆ. ಈ ಶಾಸನದಲ್ಲಿ ಶುಭಚಂದ್ರ ದೇವರು ಕನಕಗಿರಿ ಬೆಟ್ಟದ ಮೇಲೆ ಚಂದ್ರಬಾಹುಮೂರ್ತಿ ಶಿಲ್ಪವನ್ನು ಸ್ಥಾಪಿಸಿದರು. ವಿಜಯನಗರ ಅರಸ ಎರಡನೆ ದೇವರಾಯನ ಮಗ ಮೂರನೇ ಹರಿಹರ ಅಥವಾ ಕುಮಾರ ಹರಿಹರರಾಯ ಒಡೆಯರು ಮಲೆಯೂರನ್ನು ಹುಣಸೂರಪುರ ಎಂಬ ಅದರ ಉಪಗ್ರಾಮವನ್ನು ಅವುಗಳ ನಾನಾ ರೀತಿಯ ಜಮೀನು ಮತ್ತು ತೆರಿಗೆಗಳೊಂದಿಗೆ ತ್ರಿಯಂಬಕ ದೇವರ ಸನ್ನಿಧಿಯಲ್ಲಿ ಕನಕಗಿರಿಯ ಶ್ರೀ ವಿಜಯಪಾರ್ಶ್ವ ಸ್ವಾಮಿಗೆ ಸರ್ವಮಾನ್ಯ ಮಾಡಿದರು ಎಂದು ತಿಳಿದುಬರುತ್ತದೆ.

ಈ ಮೊದಲೆ ಕುಲಗಾಣದ ವಾಸುದೇವ ದೇವರಿಗೆ ನೀಡಿರುವ ಗ್ರಾಮದ ಮುಂದಿನ ಕೆರೆ, ಕೆಳಗೇಣ ಗದ್ದೆ ಈ ಸರ್ವಮಾನ್ಯಕ್ಕೆ ಸೇರಿದ್ದು ಈ ಗ್ರಾಮಗಳು ತೆರಕಣಾಂಬಿ ರಾಜ್ಯದ ಕುಲಗಾಣ ಪ್ರಾಂತ್ಯದ

ರಾಜಕುಮಾರನ ಆಳ್ವಿಕೆಗೆ ಸೇರಿದ್ದವು ಎಂಬ ಮಾಹಿತಿ ಬಸದಿಯ ತಾಮ್ರ ಶಾಸನದಲ್ಲಿ ತಿಳಿದು ಬರುತ್ತದೆ.

ಮಲೆಯೂರು ಗ್ರಾಮದ ಬೆಟ್ಟದಲ್ಲಿ ಗುಂಡಿನ ಪೂರ್ವಭಾಗದಲ್ಲಿರುವ ಶಾಸನದಲ್ಲಿ ಕ್ರಿಶ 1355ನೇ ವರ್ಷ ಏಪ್ರಿಲ್ 12 ರಂದು ಹನಸೋಗೆಯ ಲಲಿತಕೀರ್ತಿಗಳೆಂಬ ಭಟ್ಟಾರಕರು ಈ ಕ್ಷೇತ್ರಕ್ಕೆ ಸೇರಿದ ಪಾರ್ಶ್ವನಾಥಸ್ವಾಮಿ ಬ್ರಹ್ಮದೇವರು ಶಿಲ್ಪಗಳನ್ನು ಪ್ರತಿಷ್ಠಾಪನೆ ಮಾಡಿಸಿರುವ ಬಗ್ಗೆ ಮಾಹಿತಿ ಇದೆ. ಶ್ರೀ ಮೂಲಸಂಘ ದೇಶಿಯ ಗುಣ ಕೊಂಡಕುಂದಾನ್ವಯ ಪುಸ್ತಕಗುಚ್ಚ ಹನಸೋಗೆಯ ಬಳಿಯ ಶ್ರೀಮದ್ರಾಯ ರಾಜಗುರು ಮಂಡಳಾಚಾರ್ಯ ಸಮಯಾಚರಣ(ಧರ್ಮಚರಣಂ)ರು ಆದ ಹೇಮಚಂದ್ರ ಭಟ್ಟಾರಕರ ಶಿಷ್ಯರು ಬರುವರಾಯ ತೆಲುಗು ಆದಿದೇವರು ಲಲಿತಕೀರ್ತಿ ಭಟ್ಟಾರಕರ ಶಿಷ್ಯರು ಲಲಿತಕೀರ್ತಿ ಭಟ್ಟಾರಕರು ಶಕವರ್ಷ 1277 ಮನ್ಮಥ ಸಂವತ್ಸರದ ಚೈತ್ರ ಬಹುಳ 14 ಗುರುವಾರದಲ್ಲಿ ಕ್ರಿ.ಶ. 1355 ಮಾರ್ಚ್ 17 ಶುಕ್ರವಾರ ತಮ್ಮ ನಿಷಿಧಿ ನಿಮಿತ್ತವಾಗಿ ಕನಕಗಿರಿಯಲ್ಲಿ ಮಾಡಿಸಿದ ವಿಜಯದೇವರ ಪ್ರತಿಮೆಗೆ ಅವರ ಮುಖ್ಯವಾದ ಆಚಾರ್ಯ ಓಲಗರು ಮಂಗಳಮಹಾ ಶ್ರೀ ಶ್ರೀ ಶ್ರೀ ಬ್ರಹ್ಮದೇವರ ಪ್ರತಿಮೆಯನ್ನು ಮಾಡಿಸಿದರು.

ಮಲೆಯೂರಿನ ಬಸದಿಯ ಪ್ರಕಾರದ ಚಪ್ಪರಮಂಟಪದಲ್ಲಿರುವ ಶಾಸನದಲ್ಲಿ 'ಶ್ರೀ ವಿದ್ಯಾನಂದ ಸ್ವಾಮಿಗಳನ್ನು ಶ್ರೀ ವಿದ್ಯಾನಂದ ಸ್ವಾಮಿನಮಃ ಎಂಬ ಮಾತಿನಿಂದ ಸ್ಮರಿಸಿದೆ'. ಶ್ರೀಮತ್ ಅಚ್ಯುತ ರಾಜೇಂದ್ರನಿಂದ ಕೊಡಲ್ಪಟ್ಟ ಒಳ್ಳೆಯ ಮಗನು ಶ್ರೀಮತ್ ಅಚ್ಯುತ ವೀರೇಂದ್ರ ಶಿಷ್ಯಪ ಎಂಬ ಹೆಸರುಳ್ಳ ರಾಜ ಶ್ರೇಷ್ಠರು ಎಂದು ಬರೆಯಲಾಗಿದೆ. ಆತನು ವೈದ್ಯ ಶ್ರೇಷ್ಠ ಜೈನ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನು ಜೈನಧರ್ಮವೆಂಬ ಕಮಲಕ್ಕೆ ಸೂರ್ಯನು ಸಕಲಶಾಸ್ತ್ರಗಳನ್ನು ಬಲ್ಲವನು ಶ್ರೇಷ್ಠ ಪಂಡಿತರ ಸಮೂಹದಿಂದ ಸೇವಿಸಲ್ಪಡುವವನು ಮುನಿಜನರ ಪಾದಭಕ್ತನು ಬಂದುಸತ್ಕರದಲ್ಲಿ ದಷನಾದವನು, ರಾಜ ವೈದ್ಯನು ಈ ಭೂಮಂಡಲದಲ್ಲಿ ಬೆಳಗುತ್ತಾನೆ. ಈತನೆ ಧರಣಿ ಪಂಡಿತನು ಈತನ ಕುಲವನಿತ ಶ್ರೇಷ್ಠ ಪತ್ನಿಯು ಧರ್ಮ, ಅರ್ಥ, ಕಾಮಗಳೆಂಬ ಪ್ರವರ್ಗ ಸಾಧೆಯಲ್ಲಿ ಆಶಕ್ತರು, ಸಾದ್ವಿ ಒಳ್ಳೆಯ ಆಕಾರ, ಆಕೃತಿ ಉಳ್ಳವಳು, ಸನ್ನಡತೆ ಉಳ್ಳವಳು ಜಿನೇಂದ್ರನ ಪಾದಕಮಲಗಳಲ್ಲಿ ಭಕ್ತಿಯಿಂದ ಕೂಡಿದವಳು, ಭಕ್ತಿಯುಳ್ಳವಳು, ಚಿಕ್ಕತಾಯಿ ಎಂಬ ಹೆಸರಿನಿಂದ ಮಹಾಪ್ರಸಿದ್ದಳು. ಶಕವರ್ಷ 1103ನೇ ಪ್ಲವ ಸಂವತ್ಸರದ ಅಶ್ವಯುಜ ಮಾಸದ ಶುಕ್ಲ ಪಕ್ಷದ ದಶಮಿ ಗುರುವಾರ ಕ್ರಿ.ಶ. 1181ನೇ ಸೆಪ್ಟೆಂಬರ್ 19 ಶನಿವಾರದಂದು ಪಂಪ ಪರ್ವಗಳಲ್ಲಿ ಕನಕಗಿರಿಯ ಪಾರ್ಶ್ವನಾಥ ಪೂಜಾರ್ಥವಾಗಿಯೂ ಮುನಿಗಳ ನಿಥ್ಯದಾನ ಆಹಾರ ಧಾನಕ್ಕಾಗಿಯೂ ನಿರಂತರ ಶಾಸ್ತ್ರದಾನಕ್ಕಾಗಿಯೂ ಕಿನ್ನರಿಪುರದ ಚಿಕ್ಕತಾಯಿ ಎಂದೇ ಖ್ಯಾತಿ ಪಡೆದವಳಾದ ಧರಣಿ ಪಂಡಿತನ ಧರ್ಮ ಪತ್ನಿ ಚಿಕ್ಕತಾಯಿಯ ಕಿನ್ನರಿಪುರವನ್ನು ಅಚ್ಯುತರಾಯನ ಮಗನಿಂದ ದೇವಾಲಯಕ್ಕೆ ಸರ್ವಮಾನ್ಯವಾಗಿ ಬಿಡಿಸಿದಳು.

ಬಸ್ತಿಪುರದ (ಬೇಚಿರಾಕ್) ಜಿನದೇವರ ಹಿಂದೆ ಬಿದ್ದಿರುವ ವೀರಗಲ್ಲಿನಲ್ಲಿ ಸುಮಾರು ಆರು ಸಾಲುಗಳ ಶಾಸನವಿದೆ. ಈ ವೀರಗಲ್ಲು ಶಾಸನವು ಕ್ರಿ.ಶ. 10ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಈಗ ಚಾಮರಾಜನಗರ ತಾಲೂಕಿನಲ್ಲಿದ್ದ ಬಸ್ತೀಪುರ ಸಂಪೂರ್ಣ ನಾಶವಾಗಿದೆ. ಹಿಂದೆ ಇಲ್ಲಿ ಬಸದಿ ಹಾಗೂ ಜೈನರು ಇದ್ದಿರಬೇಕು ಆ ಕಾರಣಕ್ಕಾಗಿಯೇ ಈ ಊರನ್ನು ಬಸ್ತಿಪುರ ಎಂದು ಕರೆಯಲಾಗಿದೆ. ಅದೇ ರೀತಿಯ ಬಸ್ತಿಪುರವನ್ನು ಕೊಳ್ಳೆಗಾಲದಲ್ಲಿ ಕಾಣಬಹುದು. ಈ ಶಾಸನ ಅಸ್ಪಷ್ಟವಾಗಿದೆ.

ಹರವೆಯ ಬಸದಿಯ ಮಂಟಪದ ಮೇಲ್ಭಾಗದ ತೊಲೆಯ ಮೇಲಿರುವ ಶಾಸನವು 12 ಸಾಲುಗಳಿಂದ ಕೂಡಿದೆ. ಈ ಶಾಸನವನ್ನು ಕ್ರಿ.ಶ 1482 ಮಾರ್ಚ್ 24 ರಂದು ಬರೆಸಲಾಗಿದೆ. ವೀರ 10 ಸೋಮೇಶ್ವರರಾಯ ಒಡೆಯರ ಕರಣಿಕನಾದ ದೇವರಸನು ಹರವೆಯಲ್ಲಿ ಚೈತ್ಯಾಲಯ ಮತ್ತು ಪಾಕಶಾಲೆಯನ್ನು ಮಾಡಿಸಿ ಆದಿ ಪರಮೇಶ್ವರನನ್ನು ಪ್ರತಿಷ್ಠಾಪಿಸಿದರು.

ಹರವೆ ಗ್ರಾಮದ ಹೊಲವೊಂದರಲ್ಲಿ ದೊರೆತಿರುವ ಶಾಸನವು 17 ಸಾಲುಗಳನ್ನು ಹೊಂದಿದೆ. ಈ ಶಾಸನದ ಕಾಲ ಶಕವರ್ಷ 1404 ಅಂದರೆ ಕ್ರಿ.ಶ. 1442 ಮಾರ್ಚ್ 24. ಹರವೆ ಬಸದಿಗಾಗಿ ತಗಡೂರು ಪ್ರಭುಗಳು ದಾನ ನೀಡಿರುವುದು ಈ ಶಾಸನದಿಂದ ತಿಳಿದುಬರುತ್ತದೆ. ಗ್ರಾಮದ ಸುತ್ತಮುತ್ತ ಇರುವ ಹೊಲ, ಗದ್ದೆ, ಅಡಿಕೆ, ತೆಂಗು ಎಲೆಯ ತೋಟಗಳನ್ನು ಒಳಗೊಂಡು ಈ ಕ್ಷೇತ್ರದ ಎಲ್ಲಾ ಜನರು ನೆಮ್ಮದಿಯಿಂದ ಇರಲಿ, ಅಲ್ಲದೆ ಹರವೆ ಆದೀಶ್ವರನಿಗೆ ಧರ್ಮ ಪೂರ್ವಕವಾಗಿ ಪೂಜೆ ನಡೆಯಲಿ ಸರ್ವ ಸಹಪ್ರಾಣಿಗಳು ಚೆನ್ನಾಗಿರಲಿ ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಹರವೆ ಗ್ರಾಮದ ಪೂರ್ವದ ಗದ್ದೆಯೊಂದರಲ್ಲಿ ದೊರೆತಿರುವ ಶಾಸನವು 15 ಸಾಲುಗಳಿಂದ ಕೂಡಿದ್ದು, ಶಕವರ್ಷ 1237 ಅಂದರೆ ಕ್ರಿ.ಶ 1315ನೇ ಮೇ ತಿಂಗಳು 15 ರಂದು ಶಾಸನವನ್ನು ಬರೆಸಲಾಗಿದೆ. ಈ ಶಾಸನದಲ್ಲಿ ಬರೆದಿರುವ ಕೆಲವೊಂದು ಅಕ್ಷರಗಳು ಸವೆದು ಹೋಗಿವೆ. ಶಾಸನದ 11ನೇ ಸಾಲಿನಲ್ಲಿ, ಬಸದಿಗೆ ಕೊಡುಗೆಯನ್ನು ನೀಡಿರುವುದರ ಜೊತೆಗೆ ದೇವರಿಗೆ ಧಾನ್ಯಗಳನ್ನು ನೀಡಿರುವುದು ತಿಳಿದುಬರುತ್ತದೆ.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಚಾಮರಾಜನಗರ ತಾಲೂಕಿನಲ್ಲಿ ದೊರೆತಿರುವ ಜೈನ ಶಾಸನಗಳು ಮತ್ತು ಬಸದಿಗಳು ಸಮಾಜೋ–ಧಾರ್ಮಿಕ ಪ್ರವೃತ್ತಿಯನ್ನು ಸಮುದಾಯಿಕ ವಾಗಿ ಪ್ರಸ್ತುತಪಡಿಸುವಲ್ಲಿ ಯಶಸ್ವಿಯಾಗಿವೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅನಂತರಾಜ್. (2009). ಕರ್ನಾಟಕದಲ್ಲಿ ಜೈನ ಧರ್ಮೀಯರು ಅಂದಿನಿಂದ ಇಂದಿನವರೆಗೆ : ಒಂದು ಅಧ್ಯಯನ. *ಶೀಲಾ ಅನಂತರಾಜ್.*
- ಕೃಷ್ಣಮೂರ್ತಿ ಎಂ. ಎಸ್. (1981). ಬಸ್ತೀಪುರ ವರದಿ. *ಜರ್ನಲ್ಸ್ ಆಫ್ ದಿ ಆರ್ಕಿಯಾಲಾಜಿಕಲ್ ಸ್ಟಡಿ.* 6(1)
- ರೈಸ್ ಬಿ.ಎಲ್. (1894). *ಎಪಿಗ್ರಾಫಿಯಾ ಕರ್ನಾಟಿಕಾ. ಸಂಪುಟ–3&4. ಮೈಸೂರ್ ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.*
- ಶಾರದಾ ಕೆ. (2006). *ಕರ್ನಾಟಕದಲ್ಲಿ ಜೈನಧರ್ಮ.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.